ಸ್ರವಂತಿ ಮುಖದಲ್ಲಿ ತುಸು ಬೇಸರ ಕಾಣಿಸಿತು. "ನನ್ನ ಕೆಲಸನಾ!?"

"ಹೌದು. ಮನೆಗೆ ಹೋದ್ಮೇಲೆ ನಿಮ್ಮ ತಂದೆ ಎಲ್ಲಾ ಹೇಳ್ತಾರೆ."

ಅಂದ್ರೆ ಸಾಹೇಬರು ಈಗಾಗಲೇ ಕೆಲಸ ಪ್ರಾರಂಭಿಸಿರಬೇಕು ಎಂದುಕೊಂಡಳು.

"ಸಂಜೀವ್, ಆ ದೇವರು ಇಳಿದು ಬಂದ್ರು ಕೂಡ ನನ್ನ ನಿರ್ಧಾರ ಬದಲಾಗೋಲ್ಲ."

"ದೇವರು ಬರಬೇಕಾಗಿಲ್ಲ. ನಿಮ್ಮ ತಂದೆ ಇಳಿದು ಬಂದ್ರು ಅಷ್ಟು ಸಾಕು."

"ಸರಿ ಬಿಡು ಎಲ್ಲಾ ಕಾಲಾನೇ ಸರಿ ಮಾಡುತ್ತೆ" ಎಂದಾಗ ಫೋನ್ ಕಟ್ ಮಾಡಿಬಿಟ್ಟಳು.

ಮನೆಗೆ ಹೋದ ತಕ್ಷಣವೇ ಎದುರಾದ ಅಪ್ಪ ಕೈಯಲ್ಲಿ ಒಂದು ಪ್ಲೇಟ್‌ನಲ್ಲಿ ಬಿಸಿಯಾದ ಪಕೋಡ ಹಿಡಿದು ಬಂದರು. ಅಪ್ಪ ವಿಷಯ ಪ್ರಸ್ತಾಪಿಸಿದ್ರೆ ತನ್ನ ನಿರ್ಧಾರವನ್ನ ಹೇಳಿಬಿಡಬೇಕು ಎಂದು ಸಿದ್ಧಳಾದಳು.

ಧರಣಿಯನ್ನು ನೋಡಿದಳು. ತಾತ ಮಾಡಿರೋ ಪಕೋಡ ತಿನ್ನುತ್ತಾ ಹೋಂವರ್ಕ್ ಮಾಡ್ತಾ ಇದ್ದದ್ದು ನೋಡಿ ನಿಟ್ಟುಸಿರು ಬಿಟ್ಟಳು.

"ಪಕೋಡ ಚೆನ್ನಾಗಿದೆ ಅಪ್ಪ" ಮೆಚ್ಚುಗೆಯ ಮಾತು ಆಡಿದಳು. "ಟೀ ತರಲಾ, ಕಾಫೀ ತರಲಾ" ಎಂದು ಕೇಳಿದರು ಕೃಷ್ಣಮೂರ್ತಿ.

"ಏನು ಬೇಡಪ್ಪಾ, ನಾನೇ ಬೆರಸಿ ತರ್ತೀನಿ. ನೀವು ಅವಳ ಹತ್ತಿರ ಕೂತಿರಿ" ಎದ್ದು ಒಳ ಹೋದಳು.

ಅಪ್ಪ ತನ್ನ ಜೊತೆ ಮಾತನಾಡೋಕೆ ಸಿದ್ಧರಾಗಿದ್ದಾರೆಂದು ಅರ್ಥವಾಯಿತು.

ಕೃಷ್ಣಮೂರ್ತಿ ಹೆಂಡತಿಯ ರೂಂನೊಳಗೆ ಹೋಗುತ್ತಾ "ಧರಣಿಯ ಹೋಂವರ್ಕ್ ಮುಗಿಸಿ, ಅಮ್ಮನ ಕೋಣೆಗೆ ಬಾರಮ್ಮ" ಎಂದರು. "ಸರೀ ಅಪ್ಪ" ಎಂದಳು ಸ್ರವಂತಿ.

ಧರಣಿಯ ಹೋಂವರ್ಕ್ ಮುಗಿಸಿ ನಂತರ ಅಮ್ಮನ ರೂಂನೊಳಗೆ ಹೋದಳು. "ಹಾಯ್ ಮಾ" ಎಂದಳು.

ಸದಾ ಕಾಲ ಬೆಡ್ ಮೇಲಿರೋ ಅಮ್ಮ ಜೀವವಿಲ್ಲದ ನಗುವೊಂದನ್ನು ನಕ್ಕು, ಅಪ್ಪನ ಕಡೆ ನೋಡಿದರು. ಆ ನೋಟದಲ್ಲಿ ಅಪ್ಪ ಹೇಳಿದ ಹಾಗೆ ಕೇಳು ಅನ್ನೋ ಭಾವ ಇತ್ತು.

"ಸ್ರವಂತಿ, ಸಂಜೀವ್ ನಿನ್ನ ಮೀಟ್ ಮಾಡಿದ್ರಾ ಮಗಳೇ?"

"ನೀವು ಹೇಳೋ ಮಾತು ಅರ್ಥವಾಯಿತು ಅಪ್ಪ" ಎಂದಳು ಗಂಭೀರವಾದ ಧ್ವನಿಯಲ್ಲಿ.

"ಅವರು ನನ್ನ ಸ್ಥಾನದಲ್ಲಿದ್ದು ಚೆನ್ನಾಗಿ ಯೋಚಿಸಿದ್ದಾರಮ್ಮ. ಇಷ್ಟು ವರ್ಷ ನಿನ್ನನ್ನು ನಿರ್ಲಕ್ಷ್ಯ ಮಾಡಿದೆವೇನೋ ಅನ್ನಿಸ್ತಿದೆ. ನನ್ನ ಬಗ್ಗೆ ನನಗೆ ನಾಚಿಕೆ ಆಗುತ್ತೆ" ಎಂದರು ನೋವಿನಿಂದ.

"ಅಯ್ಯೋ ಅಪ್ಪ, ಯಾಕೆ ಇಷ್ಟೊಂದು ನೊಂದುಕೊಳ್ಳುತ್ತೀರಾ?"

"ಹೌದಮ್ಮ. ನಾವೆಷ್ಟು ದಿನ ಇರ್ತೀವಿ. ನಮ್ಮ ಬಗ್ಗೆ ಯೋಚಿಸಿ ನಿನ್ನ ಜೀವನ ಹಾಳು ಮಾಡ್ಕೋತಿದ್ದಿಯಾ?"

"ಹಾಗಂತ ಯಾರು ಹೇಳಿದ್ದು ಅಪ್ಪ? ಹೆಣ್ಮಕ್ಕಳಿಗೆ ಮದುವೆನೇ ಒಂದು ಜೀವನ ಅಲ್ಲ. ಮತ್ತೆ ಆ ನರಕಕ್ಕೆ ತಳ್ಳಬೇಡಿ. ಧರಣಿನ ಬೆಳೆಸಿ ಒಂದು ಸ್ಥಾನಕ್ಕೆ ಸೇರಿಸಬೇಕೆಂಬುದೇ ನನ್ನ ಮುಂದಿರುವ ಕರ್ತವ್ಯ" ಎಂದಳು ಸ್ರವಂತಿ ದೃಢ ನಿರ್ಧಾರದಿಂದ.

"ಅಲ್ಲ ಅಂತ ಹೇಳಿದೋರು ಯಾರು ತಾಯಿ. ಆ ಕೆಲಸಾನ ನೀನು ಮದುವೆ ಆದಮೇಲೂ ಮಾಡಬಹುದು. ಈಗ ನೀನು ಆರ್ಥಿಕವಾಗಿ, ಸ್ವತಂತ್ರವಾಗಿ ಬೆಳೆದು ನಿಂತಿರೋಳು. ಯಾರ ಹತ್ರ ಅಂಗಲಾಚೋದು ಬೇಕಿಲ್ಲ" ಎಂದರು ಅಪ್ಪ ತಿಳಿ ಹೇಳುವ ಪ್ರಯತ್ನದಲ್ಲಿ.